# ಹಾಸುಂಡು ಬೀಸಿ ಒಗೆದಾಂಗ

ಹೆಣ್ಣಿನ ಆತ್ಮ, ಹೆಣ್ಣುದೇಹವನ್ನು ಪುರುಷ ಬಳಸಿ ಬಿಸಾಡುವುದನ್ನು 'ಹಾಸುಂಡು ಬೀಸಿ ಒಗೆದಾಂಗ' ಎನ್ನುವ ವ್ಯಂಜನ ಪದಾರ್ಥವನ್ನಾಗಿ ನೋಡುವುದು ವ್ಯಥೆಯನ್ನು ಉಂಟುಮಾಡುತ್ತದೆ. ಹಿಂದೆ ನಮ್ಮ ಅನುಕೂಲಕ್ಕಾಗಿ ಮನೆ ಹಿತ್ತಲಿನಲ್ಲಿ ತರಕಾರಿಗಳನ್ನು ಬೆಳೆದು ಬಳಸಿಕೊಳ್ಳುತ್ತಿದ್ದೆವು. ಬೇಡವಾದ ಗಿಡಬಳ್ಳಿಗಳನ್ನು ಎಸೆದುಬಿಡುತ್ತಿದ್ದೆವು. ಇದನ್ನು ಮಾಂಸಾಹಾರಕ್ಕೆ ವಿಸ್ತರಿಸಿ ಹೇಳುವುದಾದರೆ, ಕೋಳಿಯಂಗಡಿಯಲ್ಲಿ ನಮಗೆ ಬೇಕಾದ ತೂಕಕ್ಕೆ ಕೋಳಿಯನ್ನು ಕೊಂಡು, ತ್ಯಾಜ್ಯ ತೆಗೆದು ಮಾಂಸವನ್ನು ಪಡೆಯುತ್ತೇವೆ. ಕೋಳಿಯನ್ನು ಅರಗಿಸಿಕೊಳ್ಳುವಾಗ ಬೇಕಾದುದನ್ನು ತಿಂದು ಬೇಡವಾದುದನ್ನು ಬಿಟ್ಟುಬಿಡುತ್ತೇವೆ. ಇದು ಮನುಕುಲದ ಬೇಕಾದುದನ್ನು ತಿಂದು ಬೇಡವಾದುದನ್ನು ಎಸೆಯುವ ಆಯ್ಕೆಯ ಕ್ರಮ. ಈ ರೀತಿ ಎಸೆದದ್ದನ್ನು ಪ್ರಕೃತಿಯ ಇತರೆ ಕ್ರಿಮಿಕೀಟಗಳು ತಿಂದು ಅರಗಿಸಿಕೊಳ್ಳುವುದು ನಿಸರ್ಗದ ಇನ್ನೊಂದು ರೀತಿಯ ಕ್ರಮವಾಗಿದೆ.

ಆದರೆ ಬುದ್ಧಿ–ಭಾವಗಳಿರುವ ಹೆಣ್ಣುಜೀವ ಕೇವಲ ಇಂತಹ ಪದಾರ್ಥ ಅಲ್ಲವಲ್ಲ. ಹೆಣ್ಣು ಜೀವದ ಸಾರ್ಥಕತೆಯನ್ನು ವಿವಾಹ, ಲೈಂಗಿಕ ಜೀವನದ ಸಂಗಾತಿ, ಸಂತಾನವನ್ನು ಕೊಟ್ಟು ವಂಶಾಭಿವೃದ್ಧಿ ಮಾಡುವವಳು ಎಂದಷ್ಟೇ ನೋಡುವ ನೋಟದಲ್ಲಿಯೇ ತಪ್ಪುಗಳಿವೆ. ತೊಟ್ಟಿಲು ತೂಗುವುದರ ಜೊತೆಗೆ ಕುಟುಂಬವನ್ನೂ ನಡೆಸಬಲ್ಲ ಅವಳ ತಾಳ್ಮೆ ಹಾಗೂ ಬುದ್ಧಿವಂತಿಕೆಯನ್ನು ಎಷ್ಟು ಜನ ಉದಾರವಾಗಿ ಸ್ಮರಿಸಬಲ್ಲರು. ನಡುರಾತ್ರಿಯಲ್ಲಿ ಮಹಿಳೆಯೊಬ್ಬಳು ಸುರಕ್ಷಿತವಾಗಿ ಓಡಾಡಬಲ್ಲಳೆಂದರೆ ಅಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗೆ ಅರ್ಥವಿದೆಯೆಂದೇ ಅರ್ಥ. 19 ಅಥವಾ 20 ವರ್ಷಗಳಕಾಲ ಹೆಣ್ಣಾಗಲೀ ಗಂಡಾಗಲೀ ಆ ಸಂತಾನವನ್ನು ಹಂಟೆ ಕೋಳಿಯಂತೆ ಕಾಪಾಡಿದ ತಾಯಿಯ ಕಣ್ಣೆದುರೇ, ಮಗಳನ್ನು ತಿಂದು ಗೋಣುಮುರಿದು ಎಸೆದರೆ ಅವಳ ಮನಸ್ಸು ಇದನ್ನು ಹೇಗೆ ನೋಡಬಲ್ಲದು. ತನ್ನ ಹೊಲದಲ್ಲೇ, ತನ್ನ ಮನೆಯಲ್ಲೇ ತನ್ನ ಮಗಳಿಗೆ ರಕ್ಷಣೆಯಿಲ್ಲವೆಂದರೆ ಅದನ್ನು ಅವಳು ಹೇಗೆ ಅರಗಿಸಿಕೊಳ್ಳಬಲ್ಲಳು.

ಉತ್ತರ ಪ್ರದೇಶದ ಹಾಥರಸ್‌ನಲ್ಲಿ ನಡೆದ ದುರಂತ ಈ ಎಲ್ಲಾ ನೋವಿನ ಅಲೆಗಳನ್ನು ಮನಸ್ಸಿನಲ್ಲೆಬ್ಬಿಸುತ್ತದೆ. ಅತ್ಯಾಚಾರವನ್ನೆಸಗಿದ ಅದೇ ಊರಿನ ಪ್ರಬಲ ಕೋಮಿಗೆ ಸೇರಿದ, ಅಕ್ಕತಂಗಿಯರನ್ನು ಉಳ್ಳಂತಹ ಈ ಹುಡುಗರಿಗೆ ಜೀವವೊಂದಕ್ಕೆ ಹಿಂಸೆ ಕೊಡುತ್ತಿದ್ದೇವೆ ಎಂದು ತಮ್ಮ ಬಗ್ಗೆಯೇ ಏಕೆ ಜುಗುಪ್ಸೆ ಉಂಟಾಗಲಿಲ್ಲ. ಈ ಅರಿವನ್ನು ಉಂಟುಮಾಡುವಲ್ಲಿ ತಂದೆತಾಯಿಗಳು, ಸುತ್ತಲಿನ ಸಮಾಜ ಎಲ್ಲಿ ಸೋತಿತ್ತು. ಪುರಾಣ ಹಾಗೂ ಐತಿಹಾಸಿಕ ಸಂಸ್ಕೃತಿ–ಸ್ಮಾರಕಗಳಿಗಾಗಿ ಬಡಿದಾಡಿ ಹೆಣಗಳುರುಳಿಸುವ ನಾವು ಜೀವಂತ ಮನುಷ್ಯರಿಗಾಗಿ ಏಕೆ ಬಡಿದಾಡುವುದಿಲ್ಲ. ಕುಸಿಯುತ್ತಿರುವ ದೇಗುಲಗಳಿಗೆ ಮರುಗುವ ನಾವು ಜೀವಂತ ದೇವತೆಗಳಿಗೆ ಯಾಕೆ ಕರಗುವುದಿಲ್ಲ.

ತಮ್ಮ ಅಗತ್ಯಕ್ಕೆ ತಕ್ಕ ಹಾಗೆ ಬಳಸಿಕೊಳ್ಳುವ ವಿಕೃತರ ಬಗ್ಗೆ ಬರೆದ ನಿರಂಜನರ 'ಕೊನೆಯ ಗಿರಾಕಿ' ಕತೆ ನೆನಪಾಗುತ್ತದೆ. ಕಡೆಂಗೋಡ್ಲು ಶಂಕರಭಟ್ಟರು ಸಂಪಾದಕರಾಗಿದ್ದ 'ರಾಷ್ಟ್ರಬಂಧು' ಪತ್ರಿಕೆಯ ಉಪಸಂಪಾದಕರಾಗುವ ಮೂಲಕ ಬರಹದ ಬದುಕನ್ನು ಅವರು ಆರಂಭಿಸಿದರು. ಕಯ್ಯೂರಿನ ರೈತ ಚಳವಳಿ ಕುರಿತು ಬರೆದ 'ಚಿರಸ್ಮರಣೆ' ಹಾಗೂ ಕಳೆದಹೋದ ಬೃಹತ್ ನಾಗರಿಕತೆಯೊಂದನ್ನು ಕುರಿತು ಬರೆದ 'ಮೃತ್ಯುಂಜಯ' ಅವರನ್ನು ಎಂದೂ ಮರೆಯದ ಅಗ್ರಲೇಖಕರ ಸಾಲಿನಲ್ಲಿ ನಿಲ್ಲಿಸಿವೆ. ಪ್ರಗತಿಪರವಾದ ನಿಲುವುಗಳೊಂದಿಗೆ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ದೃಢವಾಗಿ ನಂಬಿದ್ದ ಅವರು ತಮ್ಮ ಕಥನಗಳಲ್ಲಿ ಹೇಳಹೊರಟಿದ್ದು ಸಮಾಜವನ್ನು ಕಾಡುತ್ತಿದ್ದ ಅನಿಷ್ಟ ವ್ಯವಸ್ಥೆಗಳ ಬಗ್ಗೆ. 'ಕೊನೆಯ ಗಿರಾಕಿ' ಅವರನ್ನು ಸಣ್ಣಕತೆಗಳ ಲೋಕದಲ್ಲಿ ಮರೆಯಲಾಗದ ಹಾಗೆ ನಿಲ್ಲಿಸಿದ ಕತೆಯಾಗಿದೆ.

'ಕೊನೆಯ ಗಿರಾಕಿ' ಕತೆ ನಡೆಯುವುದು ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಹಾಗೂ ಈಗಿನ ಪಿ ಯು ಬೋರ್ಡ್ ಮಧ್ಯೆ ಬರುವ ಮಾರಮ್ಮ ಗುಡಿಯ ಸರ್ಕಲ್ ಜಾಗದಲ್ಲಿ. ಅಲ್ಲಿ ಮೂಕ ಹುಡುಗಿಯೊಬ್ಬಳು ತನ್ನ ಗಿರಾಕಿಗಳೊಂದಿಗೆ ಪೊದೆಯತ್ತ ಸಾಗುವುದನ್ನು, ಅವಳ ನಿಲ್ಲದ ಕಿರುಚಾಟವನ್ನು, ಆ ಕಿರುಚಾಟ ನಿಂತುಹೋದ ಸಂಗತಿಗಳನ್ನು ಗಮನಿಸುತ್ತಾರೆ. ಅಂದು ಕಣ್ಣೆದುರೇ ನಡೆದ ಸಂಗತಿ ಒಂದು ವರ್ಷ ಕಳೆದ ನಂತರ 'ಕೊನೆಯ ಗಿರಾಕಿ'ಯಾಗಿ ಮೈತಳೆಯುತ್ತದೆ. ಅಲ್ಲಿನ ಮೂಕ ಹುಡುಗಿ ಕತೆಯಲ್ಲಿ ಕಾಣಿಯಾಗಿ ಕಾಣಿಸಿಕೊಂಡಿದ್ದಾಳೆ. ಈ ಕತೆಯಲ್ಲಿ ಹಳ್ಳಿಯಲ್ಲಿನ ಕುಟುಂಬವೊಂದು ಗೇಣಿಯ ಮೇಲೆ ಒಕ್ಕಲು ವೃತ್ತಿ ಮಾಡುತ್ತಿದ್ದು, ಜಮೀನ್ದಾರ ಕೇಳಿದ ಹೆಚ್ಚು ಗೇಣಿಯನ್ನು ಕೊಡಲಾಗದೆ ಜಮೀನನ್ನು ಕಳೆದುಕೊಳ್ಳುತ್ತದೆ. ಗಂಡುಮಕ್ಕಳಿಬ್ಬರು ಕೂಲಿನಾಲಿಗಾಗಿ ದೇಶಾಂತರ ಹೋಗುತ್ತಾರೆ. ಉಳಿದ ಒಬ್ಬ ಮಗಳು ಮೂಕಿಯಾದ ಕಾಣಿಯನ್ನು ಕಟ್ಟಿಕೊಂಡು ಊರೂರು ಅಲೆಯುತ್ತಾರೆ. ಇಂತಹ ಸಂದರ್ಭದಲ್ಲಿ ಪರಿಚಯವಾದ ಮೊಂಡುಕೈಯ ಭಿಕ್ಷುಕನೊಂದಿಗೆ ಓಡಿಬಂದ ಕಾಣಿ ನಗರ ಸೇರುತ್ತಾಳೆ.

ನಗರ ಜೀವನದಲ್ಲಿ ತನ್ನೊಂದಿಗೆ ಬಂದ ಅವನು ಒಂದು ದಿನ ಬಿಟ್ಟು ಓಡಿಹೋದಾಗ ಅನಿವಾರ್ಯವಾಗಿ ತನ್ನನ್ನು ತಾನು ಮಾರಾಟದ ಸರಕನ್ನಾಗಿ ಮಾಡಿಕೊಳ್ಳುತ್ತಾಳೆ. ಕಾಲಾನಂತರ ಲೈಂಗಿಕ ಕಾಯಿಲೆಗಳ ಗೂಡಾಗುತ್ತಾಳೆ. ಭಾಷೆ, ಭಾವಗಳನ್ನು ವ್ಯಕ್ತಪಡಿಸಲಾರದ ಅವಳನ್ನು ಪುಂಡರು ಬಳಸಿಕೊಂಡು ಹಣವನ್ನೂ ಕೊಡದೆ ಶೋಷಣೆಗೀಡು ಮಾಡುತ್ತಾರೆ. ಒಂದು ದಿನ ಪುಂಡನೊಬ್ಬ ಅವಳನ್ನು ತನ್ನ ದಾಹಕ್ಕೆ ಬಳಸಿಕೊಂಡು, ಹಣ ಕೇಳಿದ ಅವಳ ಕುತ್ತಿಗೆ ಹಿಸುಕಿ, ನೆಲಕ್ಕೆ ತಳ್ಳಿ ಓಡಿಹೋಗುತ್ತಾನೆ. ಕಾಣಿ ನಿಧಾನವಾಗಿ ಉಸಿರಾಡುತ್ತಾ ಕೊನೆಯುಸಿರೆಳೆಯುತ್ತಾಳೆ. ಆಕಾಶದಲ್ಲಿ ಗಿಡುಗವೊಂದು ಅವಳ ಮೈಯಲ್ಲಿ ಉಳಿದ ಮಾಂಸವನ್ನು ಕಬಳಿಸಲು ಹೊಂಚುಹಾಕುತ್ತಿದೆ. ಇಲ್ಲಿನ ತಣ್ಣನೆಯ ವರ್ಣನೆ ಹೆಣ್ಣಿನ ಮೇಲಿನ ನಿಲ್ಲದ ನಿರಂತರ ದೌರ್ಜನ್ಯಗಳನ್ನು ಕಣ್ಣಮುಂದೆ ನಿಲ್ಲಿಸುತ್ತದೆ.

ನಿರ್ಭಯಾ ಪ್ರಕರಣದ ಕಟುವಾಸನೆ ಇನ್ನೂ ಹಸಿಯಾಗಿರುವಾಗಲೇ ನಡೆದಿರುವ ಹಾಥರಸ್ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿನ ಶವದ ಸುಟ್ಟವಾಸನೆ ಮತ್ತೆ ಉಸಿರಾಡದಂತೆ ಕಣಕುತ್ತಿದೆ. ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿಯೇ ಕೊಲ್ಲಲ್ಪಡುತ್ತಿರುವ ವಿಚಿತ್ರ ಪವಿತ್ರ ಸಂಸ್ಕೃತಿ ನಮ್ಮದು. ನಾಡನ್ನು ದೇವತೆಯನ್ನಾಗಿ ಗೌರವಿಸುವ ನಾವು ಹೆಣ್ಣನ್ನು ಮುಕ್ಕಿ ತಿನ್ನುವ ಅಮಾನವೀಯರಾದ ಗಂಡುಬಾಕರನ್ನು ಹೇಗೆ ಸೈರಿಸಿಕೊಂಡಿದ್ದೇವೆ ಎಂಬುದು ಯಕ್ಷಪ್ರಶ್ನೆಯಾಗಿದೆ. ಬಿಗಿಯಾದ ಕಾನೂನಿನ ಸರಪಳಿಯಲ್ಲಿ ಇಂತಹ ಕ್ಷುದ್ರಸಂತತಿಗಳನ್ನು ಉಸಿರುಗಟ್ಟಿಸದಿದ್ದರೆ ದಿನನಿತ್ಯವೂ ಅಮಾಯಕ ಹುಡುಗಿಯರು ಉಸಿರುಗಟ್ಟಿ ಸಾಯುವುದನ್ನು ಮೂಕಪ್ರೇಕ್ಷಕರಂತೆ ನೋಡುತ್ತಲೇ ಇರಬೇಕಾಗುತ್ತದೆ. ಇದು ಕಣ್ಣೆದುರಿಗಿನ ನಿತ್ಯಸತ್ಯ, ಕಾಡುವ ಕರುಳ ನೋವು.

■ **ಅಮೃತಮತಿ**

## ಮಾತೇ ಮುತ್ತು

- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.
  —ಮೆಕಾಲೆ
- ತಿಳಿದವಗೆ ಜಗವೆಲ್ಲ ರಸದ ಊಟ.
  —ಜಿ.ಎಸ್. ಶಿವರುದ್ರಪ್ಪ
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.
  —ಸಿ.ವಿ. ರಾಮನ್
- ನಮ್ಮ ಧರ್ಮಗಳು ನಮಗೆ ಕೂಡಿ ಬಾಳಲು ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?
  —ಸಿದ್ಧೇಶ್ವರ ಸ್ವಾಮಿಜಿ
- ಹಣಕ್ಕೆ ಕೈ ಕಾಲುಗಳಿದ್ದಂತೆ ಉಪಯೋಗಿಸಿ, ಇಲ್ಲವೇ ಕಳೆದುಕೊಳ್ಳಿ.
  —ಹೆನ್ರಿ ಫೋರ್ಡ್
- ರೂಪ ಕಣ್ಣುಗಳಿಗೆ ಸೀಮಿತ. ಗುಣ, ಆತ್ಮದವರೆಗೆ ತಲುಪುವ ಸಾಧನ.
  —ತ್ರಿವೇಣಿ